ಕರ್ಕಿ ಕೃಷ್ಣಮೂರ್ತಿ



# ಈ ಜಗವೇ ಒಂದು ಕೊಡಂಗಲೂರು...

ಜಗತ್ತಿನ ವಿವಿಧೆಡೆಗಳಲ್ಲಿ ರೂಢಿಯಿರುವ ಶಿಶ್ನದ ಆರಾಧನೆ ಏನನ್ನು ಸೂಚಿಸುತ್ತದೆ? ಅದು ಪುರುಷ ಅಹಂಕಾರವೋ ಅಥವಾ ಪ್ರಕೃತಿಸಹಜ ಅಭಿವ್ಯಕ್ತಿಯೊ?

ಎರಡು ದಶಕಗಳ ಹಿಂದೊಮ್ಮೆ, ಕಾಲೇಜು ಓದುತ್ತಿರುವ ಸಂದರ್ಭದಲ್ಲಿ ನನ್ನ ಮಲಯಾಳಿ ಸಹಪಾಠಿಯೊಬ್ಬ, 'ನನ್ನೂರಿನಲ್ಲೊಂದು ವಿಶೇಷ ಜಾತ್ರೆಯಾಗುತ್ತದೆ. ನೀವೆಲ್ಲ ಜೀವನದಲ್ಲಿ ಒಮ್ಮೆಯಾದರೂ ನೋಡ್ಲೇ ಬೇಕು' ಎನ್ನುತ್ತ ನಮ್ಮೊಂದಿಷ್ಟು ಗೆಳೆಯರನ್ನು ಕರೆದೊಯ್ದಿದ್ದ. ಕೇರಳದ ತ್ರಿಶೂರಿನ ಕೊಡಂಗಲೂರು ಎನ್ನುವ ಹಳ್ಳಿ ಅದು. ವರ್ಷಕ್ಕೊಮ್ಮೆ ಅಲ್ಲಿ ಗ್ರಾಮದೇವತೆಯ ಉತ್ಸವ ನಡೆಯುತ್ತದೆ. ಜನರೆಲ್ಲ ಗುಂಪುಗುಂಪಾಗಿ, ಮೈಗೆಲ್ಲ ಅರಿಷಿಣ ಬಳಿದುಕೊಂಡು, ಕೈಯಲ್ಲಿ ಆಯುಧಗಳನ್ನು ಹಿಡಿದು, ಮಹಿಳೆಯರು ಕೆಂಪು ಬಣ್ಣದ ಸೀರೆಯುಟ್ಟು ಕೂದಲು ಹರಡಿ, ಹೂವು ಹಣ್ಣಿನ ಹಾರ ಧರಿಸಿ, ವಿಚಿತ್ರಾಲಂಕಾರ ಭೂಷಿತರಾಗಿ ದೇವಿಯ ಗುಡಿಯತ್ತ ಮೆರವಣಿಗೆ ಹೋಗುತ್ತಾರೆ. ಜೋರಾಗಿ ಹಾಡುತ್ತ, ವಿವಿಧ ಭಂಗಿಗಳಲ್ಲಿ ನರ್ತಿಸುತ್ತ ಸಾಗುವ ಅವರ ಭಾವಾವೇಶಕ್ಕೆ ಭಕ್ತಿ ಕಾರಣವಾದರೆ, ಅದಕ್ಕೊಂದು ವಿಶೇಷ ತಂದುಕೊಡುವುದು ನೆತ್ತಿಗೇರಿದ ಹೆಂಡ. ಇಂಥದ್ದೊಂದು ಆಚರಣೆಯೂ ಇದೆ ಎಂಬ ಕಲ್ಪನೆಯೂ ಇರದಿದ್ದ ನಾವು, ಕಂಠಪೂರ್ತಿ ಕುಡಿದ ಅವರು ತೂರಾಡುತ್ತ ಕೇಕೆ ಹಾಕುತ್ತ ಸಾಗುತ್ತಿರುವ ದೃಶ್ಯವನ್ನು ದಿಗ್ಮೂಢರಾಗಿ ನೋಡಿದೆವು.

ಅದಕ್ಕಿಂತಲೂ ವಿಶಿಷ್ಟವೆನಿಸಿದ್ದು, ಅವರು ಮಲಯಾಳದಲ್ಲಿ ಹಾಡುತ್ತಿರುವ ಪದ್ಯದ ಸಾಲನ್ನು ನಮ್ಮ ಮಿತ್ರ ಅನುವಾದಿಸಿ ಹೇಳಿದಾಗ. ಸಂಪೂರ್ಣ ಲೈಂಗಿಕ ಸಂಗತಿಗಳನ್ನೇ ಹೊಂದಿದ, ಹಾಗೂ ಅವುಗಳ ಮುಖೇನವೇ ದೇವಿಯನ್ನವರು ನಿಂದಿಸುತ್ತ, ಸ್ತುತಿಸುತ್ತಿದ್ದಾರೆ ಎಂಬುದನ್ನು ನಂಬಲು ನಮಗೆ ಸಾಧ್ಯವೇ ಆಗಲಿಲ್ಲ. ನಿಜಕ್ಕೂ ಅವರು, 'ನಮ್ಮ ಕೊಡಂಗಲೂರು ದೇವತೆಯನ್ನು ತಣಿಸಲು ಬೇಕು, ತನ್ನಿ ಉದ್ದಾನುದ್ದದ ಧ್ವಜಸ್ತಂಭದುದ್ದಕ್ಕೆ ಕಡಿಮೆಯಿಲ್ಲದೊಂದು ಶಿಶ್ನ' ಎಂದೇ ಹಾಡುತ್ತಿದ್ದಾರೆಯೇ ಅನ್ನುವ ಗೊಂದಲದಲ್ಲಿ ನಾವಿರುವಂತೆಯೇ; ಆ ಗುಂಪಿನಲ್ಲಿ ಒಂದಿಷ್ಟು ಜನ ಉದ್ದದ ಮರದ ಗಳುವೊಂದನ್ನು ಹೊತ್ತು ತಂದರು. ಹೂವು, ಅರಿಷಿಣದಿಂದ ಅದನ್ನು ಅಲಂಕರಿಸಿ ಪೂಜೆಯನ್ನೂ ಮಾಡಲಾಯಿತು. ತೂತು ಕೊರೆದ ತ್ರಿಕೋಣಾಕಾರದ ಹಲಗೆಯೊಂದರಲ್ಲಿ ಆಗಷ್ಟೇ ಪೂಜಿಸಿದ ಮರದ ಗಳುವನ್ನು ಒಳಕ್ಕೆ ತೂರಿಸುವುದೂ ಹೊರತೆಗೆಯುವುದೂ ಮಾಡುತ್ತ, ಅಣಕವಾಡುತ್ತಿರುವ ಅವರ ಆಂಗಿಕವನ್ನು ನೋಡಿದ ನಮಗೆ, ಮಿತ್ರನ ಅನುವಾದ ಸರಿಯಾದದ್ದೇ ಎಂಬುದು ಮನವರಿಕೆಯಾಯಿತು.